**ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತಮುರಳಿ 03-10-1969.**

***ಸಂಪೂರ್ಣ ಸಮರ್ಪಣೆಯಲಕ್ಷಣಗಳು* (सम्पूर्ण - समर्पण की निशानियां)**

ಯಾರನ್ನು ನೋಡುತ್ತೀರಿ? ಯಾರು, ಯಾರನ್ನು ನೋಡುತ್ತಿರುವಿರಿ? (ಕೆಲವರು ತಮ್ಮ ತಮ್ಮ ವಿಚಾರವನ್ನು ತಿಳಿಸಿದರು) ಏಕೆಂದರೆ ಬಾಪ್ ದಾದಾ ತಮ್ಮ ದೀಪದ ಹುಳುಗಳನ್ನು ನೋಡುತ್ತಿದ್ದರು. ಎಲ್ಲಿಯವರೆಗೆ ಪೂರ್ಣ ತಯಾರಾಗಿರುವರು ಎಂಬುದನ್ನು ನೋಡಲು ಇಂದು ಬಂದಿದ್ದೇವೆ. ಸಾಮಾನ್ಯವಾಗಿ ದೀಪದ ಹುಳುಗಳು ದೀಪದ ಕಡೆಗೆ ಹೋಗುತ್ತವೆ ಆದರೆ ಇಲ್ಲಿ ದೀಪವೇ ಹುಳುಗಳನ್ನು ಮಿಲನ ಮಾಡುತ್ತದೆ. ಯಾರು ಸಂಪೂರ್ಣ ದೀಪದ ಹುಳುಗಳಾಗುತ್ತಾರೋ ಅವರ ಲಕ್ಷಣಗಳೇನೆಂದು ತಮಗೆ ಗೊತ್ತೇ? (ಪ್ರತಿಯೊಬ್ಬರೂ ಹೇಳಿದರು) ತಾವೆಲ್ಲರೂ ಹೇಳಿದ್ದು ಯಥಾರ್ಥವಾಗಿದೆ. ಯಾರು ದೀಪದ ಹುಳುಗಳಾಗಿದ್ದಾರೋ ಅವರು ದೀಪದ ಸ್ನೇಹಿ, ಸಮೀಪ ಮತ್ತು ಸರ್ವ ಸಂಬಂಧ ಅದರೊಂದಿಗೆ ಇರುವುದೇ ಮುಖ್ಯ ಸಾರವಾಗಿದೆ. ಆದ್ದರಿಂದ ಸರ್ವ ಸಂಬಂಧ, ಸ್ನೇಹಿ, ಸಮೀಪ ಮತ್ತು ಸಾಹಸ. ಯಾರು ಸಂಪೂರ್ಣ ದೀಪದ ಹುಳಗಳೋ ಅವರಲ್ಲಿ ಈ ನಾಲ್ಕು ಮಾತುಗಳು ಕಂಡು ಬರುವವು. ಕೆಲವು ಮಕ್ಕಳು ನಾವು ಸರಿಯಾಗಿದ್ದೇವೆ. ಆದರೆ ಪ್ರತಿಶತ (%)ದಲ್ಲಿದ್ದೇವೆ ಎಂದು ಹೇಳುತ್ತಾರೆ. ಯಾರಲ್ಲಿ ಪ್ರತಿಶತ ಕಡಿಮೆ ಇರುತ್ತದೆಯೋ ಅವರನ್ನು ಸಂಪೂರ್ಣ ದೀಪದ ಹುಳು ಎನ್ನಲಾಗುವುದಿಲ್ಲ. ಆ ಚಕ್ರದಂತೆ ಸುತ್ತುವಂತಹ ದೀಪದ ಹುಳು ಎರಡನೆಯ ದರ್ಜೆಯದು ಎಂದು ಹೇಳಲಾಗುತ್ತದೆ. ಮೊದಲನೆಯವರು ಶೀಘ್ರವೇ ಒಂದೇ ಬಾರಿಗೆ ಬೆಂಕಿಗೆ ಬಲಿಯಾಗುವವರು, ಎರಡನೆಯದು ವಿಚಾರಿಸಿ, ತಿಳಿದು ನಂತರ ಹೆಜ್ಜೆ ಇಡುವವರು, ಯಾರು ಆಲೋಚಿಸಿ ಹೆಜ್ಜೆ ಇಡುವರೋ ಅವರನ್ನು ಸುತ್ತುವಂತಹವರು ಎಂದು ಕರೆಯಲಾಗುತ್ತದೆ. ಆದ್ದರಿಂದ ಎರಡನೆಯ ವರ್ಗದ ಪತಂಗಗಳು ಅನೇಕ ಪ್ರಕಾರದ ಸಂಕಲ್ಪಗಳು, ವಿಘ್ನಗಳು ಮತ್ತು ಕರ್ಮಗಳ ಚಕ್ರದಲ್ಲಿ ಸುತ್ತುತ್ತಿರುತ್ತಾರೆ. ಇಂದು ಪಾಂಡವ ಸೇನೆಯನ್ನು ಭಟ್ಟಿಯಲ್ಲಿ ಕರೆಯಲಾಗಿದೆ. ಯಾವುದೇ ಒಳ್ಳೆಯ ಫ್ಯಾಕ್ಟರಿಯಲ್ಲಿ ತಯಾರಾದ ವಸ್ತುವಿಗೆ ಛಾಪು(ಗುರುತು) ಹಾಕಲಾಗುತ್ತದೆ. ಗುರುತು ಇಲ್ಲದಿದ್ದರೆ ಆ ವಸ್ತು ಹೆಚ್ಚು ಮಾರಾಟವಾಗುವುದಿಲ್ಲ. ಟ್ರೇಡ್ ಮಾರ್ಕ್ (Trade mark ) ಇರುತ್ತದೆಯಲ್ಲವೇ? ಅದೇ ರೀತಿ ಭಟ್ಟಿಯಲ್ಲಿ ಬಂದವರೆಲ್ಲ ಗುರುತು (Trade mark) ಹಾಕಿಸಿಕೊಳ್ಳಲು ಬಂದಿರುವಿರಿ. ಅದಾವ ಗುರುತು? ಸಂಪೂರ್ಣ ಸಮರ್ಪಿತ ಎಂಬ ಗುರುತು ಹಾಕದಿದ್ದರೆ ಏನಾಗುವುದು ಗೊತ್ತೇ? ಗುರುತು ಇಲ್ಲದಿದ್ದರೆ ವಸ್ತುವಿನ ಬೆಲೆ ಕಡಿಮೆ ಯಾಗುವುದು. ಅದೇ ರೀತಿ ತಮ್ಮ ಬೆಲೆ ಸ್ವರ್ಗದಲ್ಲಿ ಕಡಿಮೆಯಾಗುತ್ತದೆ. ತಮ್ಮ ರಾಜಧಾನಿಯಲ್ಲಿ ಸಮೀಪ ಬರಲು ಈ ಗುರುತನ್ನು ಹಚ್ಚಿಕೊಳ್ಳಲೇಬೇಕು. ಮಾತೆಯರಿಗೆ ನಷ್ಟೋಮೋಹದ ಮತ್ತು ಪಾಂಡವ ಸೇನೆಗೆ ಸಂಪೂರ್ಣ ಸಮರ್ಪಣೆಯ ಮಂತ್ರ ಸಿಕ್ಕಿದೆ. **ಕರಗಿ ಹೋದರೆಂದು ಪಾಂಡವರ ಗಾಯನವಿದೆ, ಪರ್ವತದ ಮೇಲಲ್ಲ ಆದರೆ ತಮ್ಮನ್ನು ತಾವು ಕೆಳಮಟ್ಟದಿಂದ ಮೇಲಿರುವ ಅವ್ಯಕ್ತ ಸ್ಥಿತಿಯಲ್ಲಿ ತಂದು ಉನ್ನತ ಸ್ಥಿತಿಯಲ್ಲಿ ಕರಗಿದರು ಎಂದರೆ ಆ ಅವ್ಯಕ್ತ ಸ್ಥಿತಿಯಲ್ಲಿ ಸಂಪೂರ್ಣತೆಯನ್ನು ಪಡೆದರು. ಇದು ಪಾಂಡವರ ಸ್ಮೃತಿಚಿಹ್ನೆ.** ಆ ಯಾದಗಾರ (ಸ್ಮೃತಿಚಿಹ್ನೆ) ನೆನಪಿಸಿಕೊಳ್ಳಲು ಮತ್ತು ಪ್ರಯೋಗದಲ್ಲಿ ತರಲು ಭಟ್ಟಿ ಸಿಕ್ಕಿದೆ.

ಸಂಪೂರ್ಣ **ಸಮರ್ಪಣೆ ಎಂದು ಯಾವುದಕ್ಕೆ ಹೇಳಲಾಗುತ್ತದೆ? ತನು, ಮನ, ಧನ, ಸಮಯ ಮತ್ತು ಸಂಬಂಧ ಇವೆಲ್ಲವುಗಳಲ್ಲಿ ಅರ್ಪಣೆಯನ್ನು ಸಂಪೂರ್ಣ ಸಮರ್ಪಣೆ ಎನ್ನುತ್ತಾರೆ.** ಮನಸ್ಸನ್ನು ಸಮರ್ಪಣೆ ಮಾಡಿ ಶ್ರೀಮತವಿಲ್ಲದೇ ಉಪಯೋಗಿಸಬಾರದು, ಧನ ಮತ್ತು ತನುವನ್ನು ಶ್ರೀಮತದಂತೆ ಉಪಯೋಗಿಸುವುದು ಸಹಜ ಆದರೆ ಮನಸ್ಸು ಶ್ರೀಮತ ಬಿಟ್ಟು ಒಂದು ಸಂಕಲ್ಪವನ್ನು ಉತ್ಪನ್ನ ಮಾಡಬಾರದು ಈ ಸ್ಥಿತಿಯನ್ನು ಸಮರ್ಪಣೆ ಎಂದು ಹೇಳಲಾಗುತ್ತದೆ. ಆದ್ದರಿಂದಲೇ "ಮನ್ಮನಾಭವ" ಮುಖ್ಯ ಮಂತ್ರವಾಗಿದೆ. ಮನಸ್ಸು ಸಂಪೂರ್ಣ ಸಮರ್ಪಣೆಯಾದರೆ ತನು, ಧನ, ಸಮಯ, ಸಂಬಂಧ ಶೀಘ್ರವಾಗಿ ಆ ಕಡೆಗೆ ಹೋಗುತ್ತವೆ.

ಆದ್ದರಿಂದ *ಮನಸ್ಸನ್ನು ಸಮರ್ಪಣೆ ಮಾಡುವುದು ಎಂದರೆ ವ್ಯರ್ಥ ಸಂಕಲ್ಪ, ವಿಕಲ್ಪಗಳನ್ನು ಸಮರ್ಪಣೆ ಮಾಡುವುದು* ಮುಖ್ಯ ಮಾತಾಗಿದೆ. ಅದೇ ಸಂಪೂರ್ಣ ಪತಂಗದ ಪರೀಕ್ಷೆ ಸಂಪೂರ್ಣ ಸಮರ್ಪಿತರಾದವರಿಗೆ ಮನಸ್ಸಿನಲ್ಲಿ ಬಾಪ್ ದಾದಾ ಅವರ ಗುಣ, ಕರ್ತವ್ಯ, ಮತ್ತು ಸಂಬಂಧದ ಹೊರತು ಬೇರೆ ಏನೂ ವಿಚಾರ ಬರುವುದಿಲ್ಲ. ಈಗ ಹೇಳಿ ಈ ರೀತಿಯ ಗುರುತು ಹಾಕಲ್ಪಟ್ಟಿದೆಯೇ? ಇತ್ತೀಚಿನ ದಿನಗಳಲ್ಲಿ ಆಫೀಸನಲ್ಲಿ ಕೆಲಸ ಮಾಡುವಾಗ ಕೆಲವು ವೇಳೆ ಅಲ್ಲಿಯ ವಸ್ತುಗಳನ್ನು ತಮ್ಮ ಕೆಲಸಕ್ಕೆ ಉಪಯೋಗಿಸಿಕೊಳ್ಳುತ್ತೀರಿ, ತಾವು ಸಮರ್ಪಣೆ ಮಾಡಿದಂತಹ ವಸ್ತು ತಮ್ಮದಾಗಲಿಲ್ಲ, ಯಾರಿಗೆ ಕೊಟ್ಟಿರುವಿರೋ ಅವರದಾಯಿತು, ಆಗ ಅವರ ವಸ್ತುವನ್ನು ತಾವು ತಮ್ಮ ಕಾರ್ಯದಲ್ಲಿ ಉಪಯೋಗಿಸಲಾಗುವುದಿಲ್ಲ. ಆದರೆ ಸಂಸ್ಕಾರವಿರುವುದರಿಂದ ಕೆಲವು ವೇಳೆ ಶ್ರೀಮತದಲ್ಲಿ ಮನ್ಮತ, ದೇಹಾಭಿಮಾನದ ಮತ, ಶೂದ್ರರ ಮತವನ್ನು ಉಪಯೋಗಿಸುತ್ತೀರಿ. ಆದ್ದರಿಂದಲೇ ಕರ್ಮಾತೀತ ಸ್ಥಿತಿ ಅಥವಾ ಅವ್ಯಕ್ತ ಸ್ಥಿತಿ ಸದಾ ಏಕರಸವಾಗಿರುವುದಿಲ್ಲ ಏಕೆಂದರೆ ಮನ ಭಿನ್ನ-ಭಿನ್ನ ರಸದಲ್ಲಿರುವುದರಿಂದ ಸ್ಥಿತಿಯೂ ಭಿನ್ನ-ಭಿನ್ನವಾಗಿರುತ್ತದೆ. ಒಂದೇ ರಸದಲ್ಲಿದ್ದರೆ ಒಂದೇ ಸ್ಥಿತಿಯಿರುತ್ತದೆ. ಬಾಪ್ ದಾದಾ ಅವರು ಮಕ್ಕಳನ್ನು ಹಗುರ ಮಾಡುತ್ತಾರೆ ಮತ್ತು ಮಕ್ಕಳು ಬೇಕಂತಲೇ ತಮ್ಮ ಮೇಲೆ ಭಾರ ತೆಗೆದುಕೊಳ್ಳುತ್ತಾರೆ. ಏಕೆಂದರೆ 63 ಜನ್ಮಗಳಿಂದ ವಿಕರ್ಮಗಳ ಹೊರೆ, ಲೋಕ ಮರ್ಯಾದೆಗಳ ಹೊರೆಯನ್ನು ಹೊತ್ತುಕೊಂಡು ಅಭ್ಯಾಸಿಗಳಾಗಿದ್ದೀರಿ. ಆದ್ದರಿಂದ ಭಾರವನ್ನು ಇಳಿಸಿ ಮತ್ತೆ ಹೊತ್ತುಕೊಳ್ಳುತ್ತೀರಿ. ಯಾವುದು ಅಭ್ಯಾಸವಾಗುತ್ತದೆಯೋ ಅವರು ಅದಕ್ಕೆ ದಾಸರಾಗುತ್ತಾರೆ. ಆದ್ದರಿಂದ ತಮ್ಮ ಅಭ್ಯಾಸಗಳ ಕಾರಣ ತಮ್ಮ ಜವಾಬ್ದಾರಿಯನ್ನು ಮತ್ತೆ ತಮ್ಮ ಮೇಲೆ ಇಟ್ಟು ಕೊಳ್ಳುತ್ತೀರಿ. ಒಬ್ಬೊಬ್ಬ ಪಾಂಡವ ಸಂಪೂರ್ಣ ಸಮರ್ಪಣೆಯಾಗಿ ಹೋದರೆ ಹೇಳಿ ಏನಾಗುವುದು? ಪಾಂಡವರು ತಯಾರಾದರೆ ಕೌರವರು ಮತ್ತು ಯಾದವರು ಮೈದಾನದಲ್ಲಿ ಬರುವರು, ನಂತರ ಏನಾಗುವುದು? ತಮ್ಮ ರಾಜ್ಯ ತಮಗೆ ಪ್ರಾಪ್ತಿಯಾಗುತ್ತದೆ. **"ಏನನ್ನು ಯೋಚಿಸುತ್ತವೆಯೋ, ಮಾತನಾಡುತ್ತೇವೆಯೋ, ಕೇಳುತ್ತೇವೆಯೋ, ಮಾಡುತ್ತೇವೆಯೋ ಶ್ರೀಮತವಿಲ್ಲದೆಯೇ ಮಾಡುವುದಿಲ್ಲ"** ಎಂದು ಎಲ್ಲಿಯವರೆಗೆ ಪ್ರತಿಜ್ಞೆಯನ್ನು ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಭಟ್ಟಿಯಿಂದ ಲಾಭವನ್ನು ಪಡೆಯುವುದಿಲ್ಲ. ಏನಾದರೂ ಆಗಿಯೇ ಬರುತ್ತೇವೆ, ಪರಿವರ್ತನೆಯಾಗಿಯೇ ಬರುತ್ತೇವೆ ಎಂಬ ಉತ್ಸಾಹವನ್ನು ಇಟ್ಟುಕೊಂಡು ಬಂದಿರುವಿರಲ್ಲವೇ? ಇದನ್ನೇ ಯೋಚಿಸಿಕೊಂಡು ಬಂದಿರುವಿರಲ್ಲವೇ? ಭಯವಾಗುವುದಿಲ್ಲವಷ್ಟೇ? ಎಷ್ಟೆಷ್ಟು ಆಳಕ್ಕೆ ಹೋಗುವಿರೋ ಅಷ್ಟು ಭಯ ಮಾಯವಾಗುವುದು. ಎಲ್ಲಿಯವರೆಗೆ ಯಾವುದೇ ಮಾತಿನ ಆಳಕ್ಕೆ ಹೋಗುವುದಿಲ್ಲವೋ ಅಲ್ಲಿಯವರೆಗೆ ಭಯವಾಗುವುದು. ಹೇಗೆ ಸಾಗರದ ಮೇಲಿನ ಅಲೆಗಳಲ್ಲಿ ಭಯವಾಗುವುದು ಆದರೆ ಆಳಕ್ಕೆ ಹೋದಾಗ ಶಾಂತಿಯ ಜೊತೆಗೆ ಪ್ರಾಪ್ತಿಯೂ ಆಗುತ್ತದೆ, ಆದ್ದರಿಂದ ಏನೇ ಭಯ ಪಡುವಂತಹ ಮಾತು ಬಂದಾಗ ಆಳಕ್ಕೆ ಹೋಗಿ. ಆಗ ಭಯ ಮಾಯವಾಗುವುದು. ಈಗ ಯಾವ ಲಕ್ಷ್ಯ ಮತ್ತು ಲಕ್ಷಣ ಧಾರಣೆ ಮಾಡಿಕೊಳ್ಳಬೇಕು? ಇದರಲ್ಲಿ ನಂಬರವನ್ ಆದವರಿಗೆ ಏನು ಕೊಡುವಿರಿ? ಭವಿಷ್ಯದಲ್ಲಿ ರಾಜಧಾನಿಯನ್ನಂತೂ ಪಡೆಯುವಿರಿ ಆದರೆ ಇಲ್ಲಿಯೂ ಕಾಣಿಕೆ ಸಿಗುವುದು. ಆದ್ದರಿಂದ ಪ್ರತಿಯೊಬ್ಬರೂ ನಾವು ನಂಬರವನ್ ಆಗುತ್ತೇವೆ ಎಂದು ಇದೇ ಪ್ರಯತ್ನ ಮಾಡಿ, ಎರಡನೆಯ ನಂಬರ್ ನವರಿಗೆ ಸಿಗುವುದಿಲ್ಲ. ಯಾರು ಗೆಲ್ಲುವಿರೋ ಅವರು ಮೊದಲಿಗರು. ಗೆಲ್ಲುವ ಪ್ರಯತ್ನ ಮಾಡಿ ಆಗ ಮೊದಲಿಗರಾಗುವಿರಿ. ಒಳ್ಳೆಯದು -

ತಮ್ಮೆಲ್ಲರಿಗೂ ಬಿಂದಿ ಹಚ್ಚಬೇಕೋ ಅಥವಾ ಬಿಂದು ರೂಪವಾಗಿರುವಿರೊ ? ಎಷ್ಟು ಪ್ರಕಾರದ ತಿಲಕಗಳಿರುತ್ತವೆ? ಸಂಗಮದಲ್ಲಿ ನಿರೋಗಿಯಾಗುವ ಮತ್ತು ಭವಿಷ್ಯದಲ್ಲಿ ರಾಜ್ಯಭಾಗ್ಯದ ಡಬಲ್ ತಿಲಕ ಇಂದು ಹಚ್ಚುವೆವು. ಬಿಂದು ರೂಪದ ಸ್ಮೃತಿಗಾಗಿ ಬಿಂದಿ ಹಚ್ಚಿಕೊಳ್ಳುತ್ತೀರಿ. ಬಿಂದಿ ಹಚ್ಚಿಕೊಳ್ಳುತ್ತಾ ಬಿಂದು ಆಗುವಿರಿ. ಯಾವುದೇ ವ್ಯರ್ಥ ಸಂಕಲ್ಪ ಬಂದರೆ ಬಿಂದು ಹಾಕಿ ಆಗ ತಾವೂ ಬಿಂದು ಆಗುವಿರಿ.

ಅವ್ಯಕ್ತ ಮುರಳಿ 13-10-1969.

***ಸಂಪೂರ್ಣ ಸಮರ್ಪಣೆಯ ಲಕ್ಷಣಗಳು***

ಯೋಗ ಸ್ಥಿತಿಯಲ್ಲಿ ಇದ್ದು ಮನನ-ಚಿಂತನೆ ಮಾಡಿ ಧಾರಣೆಯಲ್ಲಿ ತರಬೇಕಾದ ಸಂಕಲ್ಪಗಳು.

**ಯೋಗ ಸ್ಥಿತಿ/ಆತ್ಮಿಕ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸರ್ವ ಸಂಬಂಧ, ಸ್ನೇಹ, ಸಮೀಪ ಮತ್ತು ಸಾಹಸವಿರುವ ಸಂಪೂರ್ಣ ದೀಪದ ಹುಳು/ ಪತಂಗ.

2. ನಾನು ತಂದೆಯಿಂದ "ನಷ್ಟಮೋಹ ಮತ್ತು ಸಂಪೂರ್ಣ ಸಮರ್ಪಣೆ" ಎಂಬ ಮುದ್ರೆ (ಟ್ರೇಡ್ ಮಾರ್ಕ್) ಹಾಕಿಸಿಕೊಂಡಿರುವ ಜಗನ್ಮಾತೆ ಮತ್ತು ಪಾಂಡವ ಸ್ವರೂಪ.

3. ನಾನು ತನು, ಮನ, ಧನ ಮತ್ತು ಸಂಬಂಧಗಳನ್ನು ಶ್ರೀಮತದಂತೆ ಉಪಯೋಗಿಸುವ ಸಂಪೂರ್ಣ ಸಮರ್ಪಣಾ ಸ್ವರೂಪ.

4. ನಾನು ಸದಾ ಒಂದೇ ರಸದಲ್ಲಿರುವ ಏಕರಸ ಸ್ಥಿತಿ ಸ್ವರೂಪ.

5. ನಾನು ವಿಷಯದ ಆಳವನ್ನು ಅರಿತು ಭಯವನ್ನು ನಿವಾರಣೆ ಮಾಡಿಕೊಂಡಿರುವ ಧೈರ್ಯ ಸ್ವರೂಪ.

6. ನಾನು ಎಲ್ಲಾ ರೀತಿಯ ವ್ಯರ್ಥ ಸಂಕಲ್ಪಗಳಿಗೆ ಬಿಂದು ಇಟ್ಟಿರುವ ಬಿಂದು ಸ್ವರೂಪ.